1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.94/2015

ದಿಃ 03.04.2021

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-18 Pw-7

| | | |
|---|---|---|
| ಹೆಸರು | ಃ | ಗಾಯಿತ್ರಿ |
| ಗಂಡನ ಹೆಸರು | ಃ | ಗಂಗದಾಸಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಕಲ್ಲನಾಯಕನಹಳ್ಳಿ,<br>ಕುಣಿಗಲ್ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.16 ನನ್ನ ಅಕ್ಕ. ಚಾಸಾ.17 ನನ್ನ ತಮ್ಮ. ಚಾಸಾ.1 ನನ್ನ ಪತಿ. 1, 3 ಮತ್ತು 4ನೇ ಆರೋಪಿಗಳು ನನಗೆ ಗೊತ್ತು. 4ನೇ ಆರೋಪಿ ನನ್ನ ಪತಿಯ ಮೊದಲನೇ ಪತ್ನಿ. ನನ್ನ ಪತಿ ನನ್ನ ತಾಯಿಯ ಚಿಕ್ಕಪ್ಪನ ಮಗ. ನಾನು ಚಾಸಾ.1ರವರನ್ನು 4ನೇ ಆರೋಪಿ ನನ್ನ ಮತ್ತು ಚಾಸಾ.1ರವರ ನಡುವೆ ಅಕ್ರಮ ಸಂಬಂಧವಿರುವುದಾಗಿ ಹೇಳಿಕೊಂಡು ಬಂದಿದ್ದು ಅದರಿಂದ ಅವಮಾನವಾಗಿ ನಾನು ಚಾಸಾ.1ರವರನ್ನೇ ವಿವಾಹವಾಗಿರುತ್ತೇನೆ. ಚಾಸಾ.1 ಮತ್ತು 4ನೇ ಆರೋಪಿಗೆ 3 ಜನ ಗಂಡು ಮಕ್ಕಳು ಇರುತ್ತಾರೆ. ನನಗೆ ಮಕ್ಕಳು ಇರುವುದಿಲ್ಲ. ನನಗೆ 2014ರಲ್ಲಿ 7ನೇ ತಿಂಗಳಿಗೆ

ಗರ್ಭಪಾತವಾಗಿರುತ್ತದೆ. ಈ ಪ್ರಕರಣದಲ್ಲಿ ನನ್ನ ಪತಿಯನ್ನು ಅಪಹರಣ ಮಾಡುವ 20 ದಿನಗಳ ಹಿಂದೆ ನನಗೆ ಗರ್ಭಪಾತವಾಗಿರುತ್ತದೆ.

2. ದಿಃ04.08.2014ರಂದು ಮತ್ತು ಅದಕ್ಕೂ ಹಿಂದೆ ಆಗಾಗ ನನ್ನ ಪತಿ ನ್ಯಾಯಾಲಯಕ್ಕೆ ಹೋಗಿ ಬಂದು ಮಾಡುತ್ತಿದ್ದರು. ನಾವು ನಮ್ಮ ಮನೆಯಲ್ಲಿ ನಾನು, ನನ್ನ ತಂದೆ, ತಾಯಿ, ತಮ್ಮ ಮತ್ತು ಚಾಸಾ.1 ಇರುತ್ತೇವೆ. ಆದಿನದಂದು ನನ್ನ ಪತಿ ಯಾವುದೇ ಬಸ್ಸುಗಳು ಮಾಗಡಿಯಿಂದ ಇಲ್ಲ ಗಾಡಿ ಕಳಿಸು ಎಂದು ದೂರವಾಣಿ ಕರೆ ಮಾಡಿದ್ದರು. ಆಗ ಗಾಡಿಯಲ್ಲಿ ಪೆಟ್ರೋಲ್ ಇಲ್ಲ ಎಂದು ಚಾಸಾ.16ರವರ ಮನೆಗೆ ಮಾಗಡಿಯ ತಿರುಮಲೆಗೆ ಹೋಗಲು ಹೇಳಿದೆವು. ನಂತರ ಚಾಸಾ.16ರವರಿಗೆ ನಾವು ಮತ್ತು ಚಾಸಾ.1 ದೂರವಾಣಿ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ನಂತರ ಸುಮಾರು 30 ನಿಮಿಷಗಳಾದ ಮೇಲೆ ಚಾಸಾ.1 ದೂರವಾಣಿ ಕರೆ ಮಾಡಿ ಮಾಗಡಿ ಠಾಣೆಯ ಬಳಿ ಇರುವುದಾಗಿ ಹೇಳಿದರು. ನಂತರ ನನ್ನ ತಾಯಿ ಮತ್ತು ತಮ್ಮ ಪೊಲೀಸ್ ಠಾಣೆಯ ಬಳಿ ಹೋದರು ಚಾಸಾ.16ರವರು ಸಹ ದೂರವಾಣಿ ಕರೆ ಮಾಡಿದ್ದು, ಅವರೂ ಸಹ ಠಾಣೆಯ ಬಳಿ ಹೋದರು. ಅಲ್ಲಿಗೆ ಹೋಗಿ ನೋಡಿದಾಗ ಚಾಸಾ.1ರವನ್ನು ಕರೆದುಕೊಂಡು ಬಂದಿಲ್ಲವೆಂದು ಹೇಳಿದರು. ಠಾಣೆಯಲ್ಲೆಲ್ಲಾ ನೋಡಿದರೂ ಸಹ ಇರಲಿಲ್ಲ. ನಂತರ ನನ್ನ ತಮ್ಮ, ತಾಯಿ ಮತ್ತು ಚಾಸಾ.16 ಮನೆಗಳಿಗೆ ಹಿಂದಿರುಗಿರುತ್ತಾರೆ. ನನ್ನ ಪತಿಯ ಮೊಬೈಲ್ ಸ್ವಿಚ್ ಆಫ್ ಆಗಿತ್ತು,

ನಂತರ ಮಾರನೇ ದಿನ ಸಂಜೆ 5.30ಕ್ಕೆ ನನ್ನ ಪತಿ ನನಗೆ ದೂರವಾಣಿ ಕರೆ ಮಾಡಿದ್ದರು. ಆಗ 3ನೇ ಆರೋಪಿ ತನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ಹೇಳಿದ್ದು ಮತ್ತೊಮ್ಮೆ ಕರೆ ಮಾಡಿ ಕೆಂಪೇಗೌಡ ಆಸ್ಪತ್ರೆಗೆ ಹೋಗುತ್ತಿರುವುದಾಗಿ ಹೇಳಿದರು. ನಂತರ ನಾನು ಚಾಸಾ.16ರವರಿಗೆ ಕರೆ ಮಾಡಿ ನಾನು, ನನ್ನ ತಾಯಿ, ತಮ್ಮ ಜೊತೆಯಲ್ಲಿ ಕೆಂಪೇಗೌಡ ಆಸ್ಪತ್ರೆಗೆ ಹೋದೆವು. ಆಗ ಆಸ್ಪತ್ರೆಯಲ್ಲಿ 3ನೇ ಆರೋಪಿ ಇದ್ದರು ಮತ್ತು ನನ್ನ ಪತಿ ಐಸಿಯುನಲ್ಲಿದ್ದರು. ನಾವು 3ನೇ ಆರೋಪಿಯನ್ನು ಏನಾಯಿತೆಂದು ಕೇಳಿದೆವು. ಅವರು ಯಾರೋ ಹೊಡೆದಿರುತ್ತಾರೆ ಗಾಯವಾಗಿದೆ ಎಂದು ಹೇಳಿದರು. ನಂತರ ನನ್ನ ಪತಿ ಸುಮಾರು 4-5 ಗಂಟೆಗಳಾದ ಮೇಲೆ ಸಾಮಾನ್ಯ ವಾರ್ಡ್ ಗೆ ವರ್ಗಾವಣೆಯಾಗಿದ್ದು ತನ್ನನ್ನು ಯಾರೋ ಪೊಲೀಸ್ ಠಾಣೆಯಿಂದ ಮುಂದಕ್ಕೆ ನಿದ್ರೆ ಮಾತ್ರೆ ಕೊಟ್ಟು ಕರೆದುಕೊಂಡು ಹೋಗಿ, ನನ್ನ ಮರ್ಮಾಂಗಗಳನ್ನು ಆಪರೇಷನ್ ಮಾಡಿರುತ್ತಾರೆಂದು ಹೇಳಿದರು. ಕಾರಿನಲ್ಲಿ ನನ್ನ ಪತಿಯನ್ನು ಅಪಹರಣ ಮಾಡಿದ್ದಾಗಿ ಮತ್ತು 4-5 ಜನರ ಜೊತೆ 2ನೇ ಆರೋಪಿ ಇದ್ದುದಾಗಿ ಹೇಳಿದರು. 1ರಿಂದ 4ನೇ ಆರೋಪಿತರು ಇತರೆ ವ್ಯಕ್ತಿಗಳೊಂದಿಗೆ ಸೇರಿ ಈ ಕೃತ್ಯ ಎಸಗಿದ್ದಾರೆಂದು ತಿಳಿಯಿತು. ನಂತರ ನಾವು ವೈದ್ಯರನ್ನು ವಿಚಾರಿಸಿದಾಗ ನನ್ನ ಪತಿ ಚಾಸಾ.1ರವರಿಗೆ ಮರ್ಮಾಂಗ ತೆಗೆದಿರುವುದಾಗಿ ಹೇಳಿದರು. ಯಾವ ಕಾರಣಕ್ಕೆ ಎಂದು ನನಗೆ ಮೊದಲು ತಿಳಿದಿರಲಿಲ್ಲ. ನಂತರ ಪೊಲೀಸ್

ವಿಚಾರಣೆಯಲ್ಲಿ ನನಗೆ ತಿಳಿದಂತೆ ನನಗೆ ಮಗುವಾದರೆ ಮಗುವಿಗೆ ಆಸ್ತಿ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಈ ಕೃತ್ಯವನ್ನು ಆರೋಪಿಗಳು ಎಸಗಿರುತ್ತಾರೆ.

ಪಾಟೀ ಸವಾಲುಃ ಶ್ರೀ. ಕೆ.ಜೆ.ಜಿ., ವಕೀಲರಿಂದ 1 ಮತ್ತು 4 ನೇ ಆರೋಪಿಗಳ ಪರವಾಗಿಃ

ಚಾಸಾ.1 ರವರು ಅವರ ಮೊದಲ ಪತ್ನಿಯಿಂದ ವಿಚ್ಛೇದನ ಪಡೆದಿಲ್ಲ ಎನ್ನುವುದು ಸರಿ. ಚಾಸಾ.1 ರವರಿಗೆ ಎಷ್ಟು ಕಡೆ ಸ್ವತ್ತುಗಳು ಇದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ನನ್ನ ಪತಿ ಎಲ್ಲಿ ಮತ್ತು ಯಾವ ಪ್ರಕರಣಗಳನ್ನು ನಡೆಸುತ್ತಿದ್ದಾರೆಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ.

ಪಾಟೀ ಸವಾಲುಃ ಶ್ರೀ. ಕೆ.ಟಿ.ವಿ., ವಕೀಲರಿಂದ 2, 3, 5, 8 ಮತ್ತು 9 ನೇ ಆರೋಪಿಗಳ ಪರವಾಗಿಃ

ನನ್ನ ವಿವಾಹ ಚಾಸಾ.1 ರವರೊಂದಿಗೆ ದಿಃ04.09.2012 ರಂದು ನೆರವೇರಿತು. 2 ನೇ ಮದುವೆಗೆ ಮೊದಲನೇ ಹೆಂಡತಿ ಒಪ್ಪಿಗೆ ಕೊಟ್ಟಿದ್ದ ಬಗ್ಗೆ ನನಗೆ ಗೊತ್ತಿಲ್ಲ.

2. ದಿಃ04.08.2014 ರಂದು ನನಗೆ ನನ್ನ ಪತಿ ಚಾಸಾ.1 ರಾತ್ರಿ 9.30 ಕ್ಕೆ ಕರೆ ಮಾಡಿದ್ದರು. ಚಾಸಾ.17 ರವರು 10.15/10.30 ಕ್ಕೆ ಮಾಗಡಿಗೆ ಬಂದಿರುತ್ತಾರೆ. 3 ನೇ ಆರೋಪಿ ನನ್ನ ತಾಯಿಯ ತಂಗಿಯ ಮೈದುನ. 2 ನೇ ಆರೋಪಿ ನನ್ನ ಪತಿಗೆ ಯಾವ

ರೀತಿಯ ಸಂಬಂಧ ಎಂದು ನನಗೆ ಗೊತ್ತಿಲ್ಲ. 2ನೇ ಆರೋಪಿಯನ್ನು ನಾನು ಎಲ್ಲಿಯೂ ನೋಡಿಲ್ಲ, ನ್ಯಾಯಾಲಯದ ಮುಂದೆಯೇ ಮೊದಲ ಬಾರಿ ನೋಡಿರುತ್ತೇನೆ.

3. ನನ್ನ ಪೊಲೀಸರ ಮುಂದಿನ ಹೇಳಿಕೆಯಲ್ಲಿ 1ರಿಂದ 7ನೇ ಆರೋಪಿಗಳು ನನಗೆ ಗೊತ್ತಿರುತ್ತಾರೆ ಎಂದು ಹೇಳಿರುತ್ತೇನೆ ಎನ್ನುವುದು ಸರಿಯಲ್ಲ. ನಾನು ಚಾಸಾ.1ರವರನ್ನು ವಿವಾಹವಾಗಿಲ್ಲ ಎನ್ನುವುದು ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಶ್ರೀ. ಬಿ.ಎಸ್.ಎಂ., ವಕೀಲರಿಂದ 10ನೇ ಆರೋಪಿಯ ಪರವಾಗಿಃ ಇಲ್ಲವೆಂದಿರುತ್ತಾರೆ.

ಪಾಟೀ ಸವಾಲುಃ ಶ್ರೀ. ಟಿ.ಜಿ., ಮತ್ತು ಕೆ.ಸಿ.ಎಂ., ವಕೀಲರಿಂದಃ 6, 7, 2 ಮತ್ತು 11ನೇ ಆರೋಪಿಗಳ ಪರವಾಗಿಃ ಗೈರು ಹಾಜರಿದ್ದು ಸಕಾರಣವಿಲ್ಲದ್ದರಿಂದ ಪಾಟೀ ಸವಾಲು ಇಲ್ಲವೆಂದು ಆದೇಶಿಸಿದೆ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.